ಶ್ರೀ ಡಿ. ಮಂಜುನಾಥ್.— ಸ್ವಾಮಿ ಅಧಿಕಾರಿಗಳು ಇವರ ಜೊತೆಗೆ ಸೇರಿ ಅವ್ಯವಹಾರ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ, ಅದನ್ನು ನಾನು ಒಪ್ಪುವುದಿಲ್ಲ. ಇದು ಒಂದು ಖಾಸಗಿ ಶಾಲೆ, ಇವರು ತಮ್ಮ ಕಾಲೇಜನ್ನು ಸರಕಾರಿ ಕಟ್ಟಡದಲ್ಲಿ ನಡೆಸುತ್ತಿದ್ದಾರೆ ಎಂಬುದನ್ನು ತಿಳಿದು ನನಗೆ ಆಶ್ಚರ್ಯವಾಯಿತು, ಯಾರು ಇದಕ್ಕೆ ಪರವಾನಗಿ ಕೊಟ್ಟರು ಎಂದು ದಾಖಲೆ ಸಿಕ್ಕಿಲ್ಲ. ಇವತ್ತು ನಾನು ಒಂದು ಆಜ್ಞೆ ಮಾಡಿರುತ್ತೇನೆ. ಒಬ್ಬ ಉನ್ನತ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟು ಅದನ್ನೆಲ್ಲಾ ತನಿಖೆ ಮಾಡಿಸುತ್ತೇನೆ. ಇದನ್ನು ಸರಕಾರವೇ ತೆಗೆದುಕೊಳ್ಳಬೇಕೆಂದು ಸಾರ್ವಜನಿಕರಿಂದ ಅರ್ಜಿ ಬಂದಿದೆ, ಈ ಖಾಸಗಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಏನಿದ್ದಾನೆ, ಇವನು ಸರಕಾರಕ್ಕೆ ಮೋಸ ಮಾಡಿದ್ದಾನೆ ಎಂಬುದೂ ನನ್ನ ಗಮನಕ್ಕೆ ಬಂದಿದೆ. ಅಲ್ಲಿ ಏನಾಗಿದೆ ಎಂದರೆ ಅಲ್ಲಿಗೆ ಸಿರಾ ೨೦ ಮೈಲಿ, ತಂಮಕೂರು ೩೦ ಮೈಲಿ ಗುಬ್ಬಿಯೂ ೨೦ ಮೈಲಿ ಇದ್ದು ಅಲ್ಲಿಗೆ ಹೈಸ್ಕೂಲ್ ವಿದ್ಯಾರ್ಥಿಗಳು ಸಾಕಷ್ಟು ಬರುತ್ತಿದ್ದಾರೆ ಅಲ್ಲಿ ಕಾಲೇಜಿನ ಆವಶ್ಯಕತೆ ಇದೆ. ಅಲ್ಲಿ ಖಾಸಗಿ ವಿದ್ಯಾ ಸಂಸ್ಥೆಗೆ ಪರವಾನಗಿ ಕೊಟ್ಟು ಅನ್ಯಾಯ ಆಗಿದೆ. ಇದನ್ನು ನಾನು ಒಪ್ಪುತ್ತೇನೆ. ಇದನ್ನು ಸರಕಾರ ತೆಗೆದುಕೊಳ್ಳಬೇಕೆಂದು ಸಾರ್ವಜನಿಕರಿಂದ ಅರ್ಜಿ ಬಂದಿದೆ, ಶಿವನಂಜಪ್ಪನವರೂ ಹೇಳಿದ್ದಾರೆ ಇದನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ಮಾಡುತ್ತೇನೆ.

ಅಧ್ಯಕ್ಷರು.— ಈಗಾಗಲೇ ೧೨ ಗಂಟೆ ಆಗಿದೆ. ಆರ್.ಎನ್. ನಾಯಕ್, ಪ್ರತಾಪಚಂದ್ರ ಶೆಟ್ಟಿ, ಎಂ. ಶಿವಣ್ಣ, ಇವರ ಕೊಶ್ಚನ್‌ಗಳನ್ನು ಲ್ಯಾಪ್ಸ್ ಮಾಡಬಹುದಾಗಿತ್ತು. ಆದರೆ ನಾನು ಲ್ಯಾಪ್ಸ್ ಮಾಡುವುದಿಲ್ಲ, ಅವಕಾಶ ಕೊಡುತ್ತೇನೆ, ನಾಳೆಯಿಂದ ಯಾರೂ ಎರಡಕ್ಕಿಂತ ಹೆಚ್ಚು ಸಪ್ಲಿಮೆಂಟರಿ ಕೇಳಬಾರದು. ಟೈಮ್ ಆಗಿದ್ದರೂ ಲ್ಯಾಪ್ಸ್ ಮಾಡುವುದಿಲ್ಲ. ಮುಂದಿನ ಸಲ ನೀವು ಇದನ್ನು ತಿಳಿದುಕೊಳ್ಳಬೇಕು. ಹೆಚ್ಚು ಸಪ್ಲಿಮೆಂಟರಿ ಕೇಳಬಾರದು.

ಶ್ರೀ ಆರ್.ಎನ್. ನಾಯಕ್.—ತಮ್ಮ ದೊಡ್ಡ ಮನಸ್ಸಿಗೆ ನಾನು ಆಭಾರಿಯಾಗಿದ್ದೇನೆ.

ಭಟ್ಕಳದಲ್ಲಿ ಮಾಧ್ಯಮಿಕ ಶಾಲೆ ಪ್ರಾರಂಭ

೭೪೫ ಶ್ರೀ ಆರ್.ಎನ್. ನಾಯಕ್ಕ (ಭಟ್ಕಳ).—ಮಾನ್ಯ ಶಿಕ್ಷಣಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೧೯೬೬ನೇ ವರ್ಷಕ್ಕೆ ವರ್ಷಕ್ಕೆ ಎಷ್ಟು ಸರ್ಕಾರಿ ಮಾಧ್ಯಮಿಕ ಶಾಲೆಗಳನ್ನು ಹಾಗೂ ಖಾಸಗಿ ಮಾಧ್ಯಮಿಕ ಶಾಲೆಗಳನ್ನು ಕೋರಿ ಬೇಡಿಕೆ ಬಂದಿದ್ದವು ?

ಆ) ಸರ್ಕಾರ ಅನುಮತಿ ನೀಡಿದ ಶಾಲೆಗಳು ಎಷ್ಟು ಅವುಗಳಲ್ಲಿ ಆಂಗ್ಲ ಭಾಷೆಯ ಶಾಲೆಗಳು ಎಷ್ಟು ?

ಇ) ಭಟ್ಕಳ ತಾಲ್ಲೂಕಿನಲ್ಲಿ ಮಾಧ್ಯಮಿಕ ಶಾಲೆಗಳನ್ನು ತೆರೆಯಲು ಅನುಮತಿ ಕೋರಿ ಬೇಡಿಕೆ ಬಂದಿತ್ತೆ, ಸ್ಥಳೀಯ ಶಾಸಕರಿಂದ ಈ ಬಗ್ಗೆ ಒತ್ತಾಯವಿತ್ತೆ ? ಯಾವ ಸಂಸ್ಥೆ ಅನುಮತಿ ಕೋರಿತ್ತು ?

ಈ) ಬರುವ ಶೈಕ್ಷಣಿಕ ವರ್ಷದಿಂದಲಾದರೂ ಭಟ್ಕಳ ತಾಲ್ಲೂಕಿಗೆ ಹೊಸ ಮಾಧ್ಯಮಿಕ ಶಾಲೆಗೆ ಮಂಜೂರಾತಿ ನೀಡಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ರಾಜ್ಯದಲ್ಲಿ ೧೯೬೬-೬೭ನೇ ಸಾಲಿಗೆ ೨೯೨ ಸರ್ಕಾರಿ ಪ್ರೌಢಶಾಲೆ ಹಾಗೂ ೬೫೬ ಖಾಸಗಿ ಪ್ರೌಢಶಾಲೆಗಳ ಮಂಜೂರಾತಿಗೆ ಅರ್ಜಿಗಳು ಬಂದಿದ್ದವು.

೧೯೬೬-೬೭ನೇ ಸಾಲಿಗೆ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿಲ್ಲ. ೨೦ ಖಾಸಗಿ ಪ್ರೌಢಶಾಲೆಗಳನ್ನು ಆರಂಬಿಸಲು ಅವಮಂತಿ ನೀಡಲಾಗಿದ್ದು ಇವುಗಳಲ್ಲಿ ೧೦ ಶಾಲೆಗಳು ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳು ಇರುತ್ತವೆ.

ಹೌದು ಸ್ಥಳೀಯ ಶಾಸಕರಿಂದ ಒತ್ತಾಯ ಬಂದಿಲ್ಲ. ಮಹಾಸತಿ ಶಿಕ್ಷಣಸಂಸ್ಥೆ ಸಾಡಿಗದ್ದೆ,ಪೋಸ್ಟ್ ಭಟ್ಕಳ, ತಾಲ್ಲೂಕು ಭಟ್ಕಳ ಇವರಿಂದ ಖಾಸಗಿ ಪ್ರೌಢಶಾಲೆ ಮಂಜೂರು ಮಾಡುವ ಬಗ್ಗೆ ಅರ್ಜಿ ಬಂದಿತ್ತು.

೧೯೮೬-೮೭ರಲ್ಲಿ ಶಾಲೆಗಳನ್ನು ಆರಂಭಿಸುವ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ನಿರ್ಧಾರ ಕೈಗೊಂಡಾಗ ಈಬೇಡಿಕೆಯನ್ನು ಸಹ ಪರಿಶೀಲಿಸಲಾಗುವುದು

ಶ್ರೀ ಆರ್ ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ೨೦ ಶಾಲೆಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆ ಅದರಲ್ಲಿ ಸುಮಾರು ೧೦ ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಪರ್ಮಿಶನ್ ಕೊಟ್ಟಿದ್ದಾರೆ ಹಿಂದೆ ಸರ್ಕಾರದವರು ಹೇಳಿದ್ದರು ಅದೇನೆಂದರೆ ನಾವು ಇನ್ನು ಮುಂದೆ ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಪರವಾನಿಗೆಯನ್ನು ಕೊಡುವುದಿಲ್ಲವೆಂದು ಆದರೂ ಸಹ ಈಗ ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆ ಇದಕ್ಕೆ ಯಾರ ಒತ್ತಾಯವಿತ್ತು ? ಇದರಿಂದ ಕನ್ನಡ ಮಿಡಿಯಂ ಶಾಲೆಗಳಿಗೆ ಧಕ್ಕೆಯಾಗುವುದಿಲ್ಲವೇ ? ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು ಈ ಬಗ್ಗೆ ಏನು ಹೇಳಿದರು ಎಲ್ಲಾ ಕಡೆಯಲ್ಲಿ ಕಾನ್ವೆಂಟ್ ಶಾಲೆಗಳಿರುವುದರಿಂದ ಮಕ್ಕಳನ್ನು ಆ ಕಾನ್ವೆಂಟ್ ಶಾಲೆಗಳಿಗೆ ಕಳುಹಿಸಿ ಕೊಡುತ್ತಾರೆ. ಕಾರಣ ಇಲ್ಲಿ ಗುಣಮಟ್ಟ ಹೆಚ್ಚು ಇರುತ್ತದೆ ಕನ್ನಡ ಶಾಲೆಗಳಲ್ಲಿ ಗುಣಮಟ್ಟ ಕಡಿಮೆ ಇರುವುದರಿಂದ ಅಲ್ಲಿಗೆ ಮಕ್ಕಳನ್ನು ಕಳುಹಿಸಿಕೊಡುವುದಿಲ್ಲ ಈ ಬಗ್ಗೆ ಮಾನ್ಯ ಮಂತ್ರಿಗಳೇನು ಉತ್ತರಕೊಡುತ್ತಾರೆ ? ಮತ್ತು ಕನ್ನಡ ಶಾಲೆಗಳ ಗುಣಮಟ್ಟ ಜಾಸ್ತಿ ಮಾಡಲು ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಡಿ. ಮಂಜುನಾಥ್,—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಯಾರ ಒತ್ತಾಯವಿತ್ತು ಎಂದು ಕೇಳಿದ್ದಾರೆ ಅದಕ್ಕೆ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ನಾವು ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಪರವಾನಿಗೆಯನ್ನು ಕೊಡುವಾಗ ಕೆಲವು ಶರತ್ತುಗಳನ್ನು ಹಾಕಿ ಕೊಡುತ್ತಿದ್ದೇವೆ ಅದೇನೆಂದರೆ ಒಂದನೇ ತರಗತಿಯಿಂದ ಎಳನೇ ತರಗತಿಯವರೆವಿಗೂ ಇಂಗ್ಲೀಷ್ ಮಿಡಿಯಂ ಶಾಲೆಗಳಲ್ಲಿ ವ್ಯಾಸಂಗ ಮಾಡಿದಂತಹ ಮಕ್ಕಳು ಏನೇ ತರಗತಿಯಿಂದ ಕನ್ನಡದಲ್ಲಿ ವ್ಯಾಸಂಗ ಮಾಡಲು ಕಷ್ಟವಾಗುತ್ತದೆ, ಅಂತಹ ಸಂದರ್ಭಗಳಲ್ಲಿ ನಾವು ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಪರವಾನಿಗೆಯನ್ನು ಕೊಡಬೇಕಾಗುತ್ತದೆ. ಆ ರೀತಿಯಲ್ಲಿ ಪರವಾನಿಗೆಯನ್ನು ಕೊಟ್ಟ ಸಂದರ್ಭದಲ್ಲಿ ಅಲ್ಲಿ ಒಂದು ಕನ್ನಡ ಮಿಡಿಯಂ ಶಾಖೆಯನ್ನು ಸಹ ತೆಗೆಯಬೇಕೆಂದು ಷರತ್ತು ಹಾಕಿದ್ದೇವೆ. ಮತ್ತು ನೌಕರರನ್ನು ನೇಮಕ ಮಾಡಿಕೊಳ್ಳುವಾಗ ರೋಸ್ಟರ್ ಸಿಸ್ಟಂ ಅನ್ನು ಪಾಲಿಸಬೇಕೆಂದು ಸಹ ಹೇಳಿದ್ದೇವೆ. ಅವರಿಗೆ ಸರ್ಕಾರದಿಂದ ಯಾವುದೇ ರೀತಿಯ ಅನುದಾನ ಕೊಡುವುದಿಲ್ಲ. ಮತ್ತು ಒಂದನೇ ತರಗತಿಯಿಂದಲೇ ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ತೆರೆಯಲು ಸರ್ಕಾರ ಪರವಾನಿಗೆಯನ್ನು ಯಾರಿಗೂ ಕೊಟ್ಟಿಲ್ಲ. ಈ ಬಗ್ಗೆ ಪರಿಶೀಲನೆ ಮಾಡಲು ಸರ್ಕಾರ ಕ್ಯಾಬಿನೆಟ್ ಸಬ್ ಕಮಿಟಿಯೊಂದನ್ನು ರಚನೆ ಮಾಡಿದೆ ಅವರು ವರದಿಯನ್ನು ಸರ್ಕಾರಕ್ಕೆ ಕೊಟ್ಟ ಮೇಲೆ ಆ ಬಗ್ಗೆ ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳಲಾಗುವುದು.ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ತೆರೆಯಬೇಕೆಂದು ಅನೇಕ ಜನ ಅರ್ಜಿಗಳನ್ನು ಹಾಕಿದ್ದಾರೆ. ಈ ಬಗ್ಗೆ ಒಂದು ಪಾಲಿಸಿಯನ್ನು ಅನುಷ್ಠಾನಕ್ಕೆ ತಂದಾಗ ಇವರ ಅರ್ಜಿಗಳನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ನಾನು ನೇರವಾಗಿ ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಕೇಳುತ್ತೇನೆ. ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಅನುಮತಿಯನ್ನು ಕೊಟ್ಟಿರುವುದರಿಂದ ಕನ್ನಡದ ಬೆಳವಣಿಗೆಗೆ ಕುಂಟಿತವಾಗುವುದಿಲ್ಲವೇ? ಕಾನ್ವೆಂಟ್ ಶಾಲೆಗಳಿಗೆ ಮಕ್ಕಳನ್ನು ಹೆಚ್ಚಾಗಿ ಕಳುಹಿಸಿ ಕೊಡುತ್ತಾರೆ ಕಾರಣ ಅಲ್ಲಿನ ಗುಣಮಟ್ಟ ಹೆಚ್ಚಾಗಿರುತ್ತದೆಂದು. ಆದ್ದರಿಂದ ಕನ್ನಡ ಶಾಲೆಗಳಲ್ಲಿ ಕೂಡ ಗುಣಮಟ್ಟ ಹೆಚ್ಚು ಮಾಡುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ಕನ್ನಡ ಶಾಲೆಗಳಲ್ಲಿ ಗುಣಮಟ್ಟವನ್ನು ಜಾಸ್ತಿ ಮಾಡಲು ಸರ್ಕಾರದವರು ಈಗಾಗಲೇ ಪ್ರಯತ್ನ ಮಾಡಿದ್ದಾರೆ. ಇದರಿಂದ ಮಾನ್ಯ ಸದಸ್ಯರು ತಿಳಿದು ಕೊಂಡಿರುವಂತೆ ಕನ್ನಡ ಶಾಲೆಗಳಿಗೆ ಯಾವ ರೀತಿಯಲ್ಲೂ ಧಕ್ಕೆಯಾಗುವುದಿಲ್ಲ. ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಗುಣಮಟ್ಟ ಕಡಿಮೆ ಇರುವುದರಿಂದ ಹೆಚ್ಚು ಹೆಚ್ಚು ಸೌಕರ್ಯಗಳನ್ನು ನಾವು ಈಗ ಒದಗಿಸಿ

ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಆದ್ದರಿಂದ ಇದು ಅಷ್ಟು ಧಕ್ಕೆಯಾಗಲಾರದು. ನಮ್ಮ ರಾಜ್ಯದ ಜನತೆಯಲ್ಲಿ ಇಂಗ್ಲೀಷ್ ಮಾಧ್ಯಮದ ಹುಚ್ಚು ಇನ್ನು ಹೋಗಿಲ್ಲ. ಈಗ ನಮ್ಮ ಮಾನ್ಯ ಸದಸ್ಯರಾದಂಥ ಇದಿನಬ್ಬನವರು ಒಂದು ಶಾಲೆಯನ್ನು ನಡೆಸುತ್ತಿದ್ದಾರೆ. ಅವರು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಅವರು ಅನೇ ತರಗತಿಯಿಂದ ಇಂಗ್ಲೀಷ್ ಮಿಡಿಯಂ ಶಾಲೆಯನ್ನು ನಡೆಸುವುದಕ್ಕೆ ಅನುಮತಿ ಕೊಡಬೇಕೆಂದು ಕೇಳುತ್ತಿದ್ದಾರೆ. ಇಂತಹ ಸಂದರ್ಭಗಳು ಬಂದಾಗ ನಾವು ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ನಡೆಸುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ನಾಕು, ಎಷ್ಟು ಕ್ಲಾರಿಫಿಕೇಶನ್ಸ್ ಕೇಳುತ್ತೀರಿ. ಟೈಮ್ ಇಲ್ಲ ತಾವು ಕುಳಿತು ಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಕನ್ನಡ ಮಾಧ್ಯಮದ ಶಾಲೆಗಳ ಗುಣಮಟ್ಟ ಕಡಿಮೆ ..

ಅಧ್ಯಕ್ಷರು.—ಇಲ್ಲ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮಂತ್ರಿಗಳು ಸಂದರ್ಭಕ್ಕೆ ತಕ್ಕಂತೆ ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಪರವಾನಿಗೆಯನ್ನು ಕೊಡುತ್ತೇವೆಂದು ಹೇಳಿದರು...

ಅಧ್ಯಕ್ಷರು.—ಇಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ, ಬೇಕಾದರೆ ತಾವು ಇದನ್ನು ಅರ್ಧ ಗಂಟೆ ಚರ್ಚೆಗೆ ಕಳುಹಿಸಿಕೊಡಿ...

ಶ್ರೀ ಡಿ. ಮಂಜುನಾಥ್.—ಕನ್ನಡ ಶಾಲೆಗಳಲ್ಲಿ ಗುಣಮಟ್ಟ ಹೆಚ್ಚು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರಿ ಕನ್ನಡ ಶಾಲೆಗಳ ಗುಣಮಟ್ಟವನ್ನು ಏರಿಸುವುದಕ್ಕೆ ಮತ್ತು ಸರಿಯಾದ ರೀತಿಯಲ್ಲಿ ಉತ್ತೇಜಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಪ್ರತಾಪ ಚಂದ್ರಶೆಟ್ಟಿಯವರು...

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು

ಹೆಚ್.ಡಿ. ಕೋಟೆಯಲ್ಲಿನ ಲೋಕೋಪಯೋಗಿ ಇಲಾಖೆಯ ಳನೇ ಉಪ ವಿಭಾಗ ಕಚೇರಿಯಂ ತನಿಖೆ

೧೨೭೪ (ಎ) ಶ್ರೀ ಎಂ. ಶಿವಣ್ಣ.—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಚ್.ಡಿ. ಕೋಟೆ ತಾಲ್ಲೂಕು ಲೋಕೋಪಯೋಗಿ, ಳನೇ ಉಪ ವಿಭಾಗ ಇಲಾಖೆಯಲ್ಲಿ ಕಳಪೆ ಕೆಲಸ ನಡೆದಿರುವ ಬಗ್ಗೆ ಸಾರ್ವಜನಿಕರಿಂದ ಬಂದ ದೂರಿನ ಆಧಾರದ ಮೇಲೆ ಇಲಾಖೆಯ ಪತಿಯು ವಿಜಿಲೆನ್ಸ್‌ನಿಂದ ತನಿಖೆ ಮಾಡಿಸಲಾಗಿದೆಯೇ.

ಆ) ಹಾಗಿದ್ದಲ್ಲಿ ತನಿಖೆಯನ್ನು ಸಾರ್ವಜನಿಕರ ಸಮಕ್ಷಮದಲ್ಲಿ ಮಾಡಲಾಯಿತೆ.

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮಂತ್ರಿಗಳು).—

ಅ) ಹೌದು

ಆ) ಇಲಾಖಾ ಪತಿಯಿಂದ ಮಾಡುವ ತನಿಖೆಯನ್ನು ಸಾರ್ವಜನಿಕರ ಸಮಕ್ಷಮದಲ್ಲಿ ಮಾಡಲಾಗುವುದಿಲ್ಲ.

ಇ) ತನಿಖಾ ವರದಿಯಲ್ಲಿಯಂ ಲೋಪದೋಷಗಳಿಗೆ ಹೊಣೆಗಾರರಾದವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲಂ ಆದೇಶಮಾಡಲಾಗಿದೆ.